# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್–3134/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 03/04/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ರಾಘವೇಂದ್ರ ಉಪಾಧ್ಯಾಯ, ಮಾಳ ಗ್ರಾಮ ಮತ್ತು ಅಂಚೆ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*–*–*

ಪ್ರಕರಣದ ದೂರುದಾರರಾದ ಶ್ರೀ ರಾಘವೇಂದ್ರ ಉಪಾಧ್ಯಾಯ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮಾಳ ಗ್ರಾಮದ ಸರ್ವೇ ನಂ.446/13ರಲ್ಲಿ 0.60 ಎಕರೆ ಜಮೀನನ್ನು ಅದೇ ಗ್ರಾಮದ ಶ್ರೀ ಸಂಜೀವ ಶೆಟ್ಟಿ ಇವರಿಂದ ಖರೀದಿಸಿದ್ದು, ಅಲ್ಲಿ ಕೃಷಿ ಮಾಡುವ ಉದ್ದೇಶದಿಂದ ಹಾಗೂ ಭದ್ರತೆಯ ದೃಷ್ಟಿಯಿಂದ ಸದರಿ ಜಮೀನಿಗೆ ಆವರಣ ಗೋಡೆ (ಕಾಂಪೌಂಡ್ ವಾಲ್) ಕಟ್ಟುವ ಉದ್ದೇಶದಿಂದ ಪರವಾನಗೆಗಾಗಿ ಅಗತ್ಯ ದಾಖಲೆಗಳೊಂದಿಗೆ ದಿ:16/01/2014 ರಂದು ಎದುರುದಾರರ ಕಛೇರಿಗೆ ಅಂದರೆ ಮಾಳ ಗ್ರಾಮ ಪಂಚಾಯತಿಗೆ ಸಲ್ಲಿಸಲಾಗಿರುತ್ತದೆ. ಎದುರುದಾರರು ಸ್ವತ: ಅರ್ಜಿ ಸ್ವೀಕರಿಸಿದ್ದು, ಸ್ವೀಕೃತಿಯನ್ನು ನೀಡಿರುವುದಿಲ್ಲ. ಈ ಬಗ್ಗೆ ಅನುಮಾನಗೊಂಡು ದೂರವಾಣಿ ಮುಖೇನ ಎದುರುದಾರರನ್ನು ಸಂಪರ್ಕಿಸಿದಾಗ ಗ್ರಾಮ ಪಂಚಾಯತಿಗೆ ಹೋಗಿ ಪರವಾನಗೆ ಪಡೆಯಲು ತಿಳಿಸಿರುತ್ತಾರೆ. ದಿ:07/02/2014 ರಂದು ಪಂಚಾಯತಿ ಕಛೇರಿಗೆ ಹೋಗಿ ಪರವಾನಗೆಯ ಬಗ್ಗೆ ಕೇಳಿದಾಗ, ಎದುರುದಾರರು ಪರವಾನಗೆ ನೀಡಲು ಬರುವುದಿಲ್ಲವೆಂದು ಪರವಾನಗೆ ಇಲ್ಲದೇ ಆವರಣ ಗೋಡೆ ಕಟ್ಟಿಕೊಳ್ಳಿ ಇಲ್ಲವೆಂದರೆ ದಕ್ಷಿಣೆ ನೀಡಿ ಎಂದು ತಿಳಿಸಿರುತ್ತಾರೆ. ಇದಲ್ಲದೇ ಶ್ರೀ ರತ್ನಾಕರ್ ಶೆಟ್ಟಿ ಎನ್ನುವವರು ಪಂಚಾಯತಿಗೆ ದೂರುದಾರರು ಆವರಣ ಗೋಡೆ ಕಟ್ಟುವ ಬಗ್ಗೆ ಆಕ್ಷೇಪಿಸಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ಪಂಚಾಯತಿಯಲ್ಲಿ ಜಾಗದ ಅಳತೆಗಾಗಿ ನಿರ್ಣಯ

ತೆಗೆದುಕೊಳ್ಳಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ, ಸದರಿ ಶ್ರೀ ರತ್ನಾಕರ್ ಶೆಟ್ಟಿಯವರು ಜಮೀನಿನ ಗಡಿಕಲ್ಲುಗಳನ್ನು ನಾಶಪಡಿಸಿದ್ದು, ಈ ಬಗ್ಗೆ ತಾನು ಪೊಲೀಸರಿಗೆ ದೂರು ನೀಡಿದ್ದಾಗಿರುತ್ತದೆ. ಇದಲ್ಲದೇ, ಎದುರುದಾರರ ವಿರುದ್ಧ ಕ್ರಮ ಜರುಗಿಸಲು ಕೋರಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಪತ್ರ ಬರೆಯಲಾಗಿರುತ್ತದೆ. ಆದ್ದರಿಂದ, ಎದುರುದಾರರ ವಿರುದ್ದ ಕ್ರಮ ಜರುಗಿಸಬೇಕೆಂದು ಹಾಗೂ ತನ್ನ ಜಮೀನಿನಲ್ಲಿ ಆವರಣ ಗೋಡೆ ಕಟ್ಟಲು ಅವಕಾಶ ಮಾಡಿಕೊಡಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ ಕಲಂ 64 ರಡಿಯಲ್ಲಿ ಗ್ರಾಮ ಪಂಚಾಯತಿಗಳು ತಮ್ಮ ವ್ಯಾಪ್ತಿಯಲ್ಲಿ ಕಟ್ಟಡಗಳ ನಿರ್ಮಾಣವನ್ನು ನಿಯಂತ್ರಿಸಲು ಮತ್ತು ಅವುಗಳ ರಚನೆಯಲ್ಲಿ ಪರವಾನಗೆಯನ್ನು ನೀಡಲು ಅಧಿಕಾರ ಹೊಂದಿರುತ್ತದೆ. ಈ ಉದ್ದೇಶಕ್ಕಾಗಿ ಸರ್ಕಾರವು 1994ರ ಕರ್ನಾಟಕ ಪಂಚಾಯತ್‌ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಗ್ರಾಮ ಪಂಚಾಯತಿಗಳ ನಿಯಂತ್ರಣ) ನಿಯಮಗಳನ್ನು ರೂಪಿಸಿರುತ್ತದೆ. ಈ ನಿಯಮಗಳ 7ನೇ ನಿಯಮ "ಕಟ್ಟಡದ ನಿರ್ಮಾಣಕ್ಕಾಗಿನ ಅನುಮತಿಯನ್ನು ಕೊಡುವುದರಲ್ಲಿ ಅಥವಾ ನಿರಾಕರಿಸುವುದರಲ್ಲಿ, ಗ್ರಾಮ ಪಂಚಾಯತಿಯು ಆ ಸೊತ್ತಿನ ಸ್ವಾಮ್ಯಕ್ಕೆ ಸಂಬಂಧಿಸಿದ ಜಟಿಲ ಪ್ರಶ್ನೆಗಳ ಬಗ್ಗೆ ಗಮನ ಹರಿಸತಕ್ಕುದಲ್ಲ ಮತ್ತು ಅರ್ಜಿದಾರನ ಮತ್ತು ಅನುಮತಿಯನ್ನು ಕೊಡುವುದಕ್ಕೆ ಆಕ್ಷೇಪಿಸುವ ಇತರೆ ಯಾವನೇ ವ್ಯಕ್ತಿಯ ನಡುವೆ ಅಂತ ಪ್ರಶ್ನೆಗಳು ಉದ್ಭವಿಸಿದ ಪಕ್ಷದಲ್ಲಿ, ಗ್ರಾಮಪಂಚಾಯತಿಯು ಸ್ವಾಮ್ಯದ ಬಗ್ಗೆ ಸಕ್ಷಮ ನ್ಯಾಯಾಲಯದ ತೀರ್ಮಾನವನ್ನು ಪಡೆದ ಹೊರತು ಆ ಅನುಮತಿಯನ್ನು ಕೊಡಲು ನಿರಾಕರಿಸತಕ್ಕದ್ದು" ಈ ಮೇಲಿನ ನಿಯಮವು ದೂರುದಾರರು ಅರ್ಜಿ ಸಲ್ಲಿಸಿದಾಗ ಅಸ್ತಿತ್ವದಲ್ಲಿದ್ದು, ಈಗ ಸದರಿ ನಿಯಮವು ನಿರಸನ ಗೊಂಡಿರುತ್ತದೆ. ದೂರುದಾರರು ತಾನು ಖರೀದಿಸಿದ ಭೂಮಿ ವಿಸ್ತೀರ್ಣಕ್ಕೆ ಆವರಣ ಗೋಡೆ ರಚಿಸಲು ದಿ:16/01/2014 ರಂದು ಅರ್ಜಿ ಸಲ್ಲಿಸಿದ್ದರೂ, ದಿನಾಂಕ 23/01/2014 ರಂದು ದೂರುದಾರರಿಗೆ ಭೂಮಿ ಮಾರಾಟ ಮಾಡಿದ ವ್ಯಕ್ತಿಯ ಕುಟುಂಬದ ಸದಸ್ಯರೆ ಆದ ಶ್ರೀ ರತ್ನಾಕರ್ ಶೆಟ್ಟಿ ಎಂಬುವವರು ಪಂಚಾಯತಿಗೆ ಮನವಿ ಸಲ್ಲಿಸಿ ತಮ್ಮ ಮತ್ತು ದೂರುದಾರರ ನಡುವಿನ ಭೂಮಿಯ ಗಡಿ ಗುರುತಿಸುವ ಕೆಲಸ ಸಂಪೂರ್ಣವಾಗದೇ ಇರುವುದರಿಂದ, ಶ್ರೀ ಉಪಾಧ್ಯಾಯರು ಆವರಣ ಗೋಡೆ ಕಟ್ಟಲು ಅನುಮತಿ ಕೋರಿ ಸಲ್ಲಿಸಿದ ಅರ್ಜಿಯನ್ನು ಗ್ರಾಮ ಪಂಚಾಯತಿ ವತಿಯಿಂದ ತಡೆಯಿಡಿಯಬೇಕೆಂದು ಕೋರಿಕೊಂಡಿದ್ದರು. ಆದ್ದರಿಂದ, ಉದ್ದೇಶಿತ ಆವರಣ ಗೋಡೆಯ ಭೂಮಿಯ

ಬಗ್ಗೆ ವಿವಾದ ಇದ್ದುದ್ದರಿಂದ, ದಿ:03/03/2014 ರ ಗ್ರಾಮ ಪಂಚಾಯತಿಯ ಸಭೆಯಲ್ಲಿ ನಿರ್ಣಯ ಸಂಖ್ಯೆ: 48/2013-14 ರಲ್ಲಿ "ಮಾಳ ಗ್ರಾಮದಸರ್ವೆ ನಂ.446/13 ರಲ್ಲಿ 0.60 ಎಕರೆ ಸ್ಥಳದ ಗಡಿ ಗುರುತಗಳ ಬಗ್ಗೆ ತಕರಾರು ಇರುವುದರಿಂದ, ಎರಡು ಕಡೆಯವರು ಜಂಟಿಯಾಗಿ ಸರ್ವೆ ಇಲಾಖೆಯಿಂದ ಮರು ಅಳತೆ ಮಾಡಿಸಿ ಸರಿಯಾದ ಗಡಿ ಗುರುತುಗಳನ್ನು ಹಾಕಿಸಿಕೊಳ್ಳಬೇಕು, ಆ ತನಕ ಶ್ರೀ ರಾಘವೇಂದ್ರ ಉಪಾಧ್ಯಾಯರವರು ಅನುಮತಿಗಾಗಿ ನೀಡಿದ ಅರ್ಜಿಯನ್ನು ವಿಲೇ ಇಡುವುದಾಗಿ ಸರ್ವಾನುಮತದಿಂದ ನಿರ್ಣಯಿಸಲಾಯಿತು", ಎಂದು ನಿರ್ಣಯ ತೆಗೆದುಕೊಳ್ಳಲಾಗಿರುತ್ತದೆ. ಆದ್ದರಿಂದ, ದೂರುದಾರರು ತನಗೆ ಪರವಾನಗೆ ದೊರೆಯದೇ ಇದ್ದುದ್ದರಿಂದ ತನ್ನ ವಿರುದ್ಧ ದೂರುಗಳನ್ನು ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯತಿಗೆ ಮತ್ತು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ನೀಡಿರುತ್ತಾರೆ. ಈ ಬಗ್ಗೆ ಯಾವುದೇ ಪ್ರಾಧಿಕಾರವು ಆದೇಶ ನೀಡಿರುವುದಿಲ್ಲ. ಇಷ್ಟಕ್ಕೂ ಮಾಳ ಗ್ರಾಮ ಪಂಚಾಯತಿಯಲ್ಲಿ ಇವರ ಅರ್ಜಿಯನ್ನು ದಿ:03/03/2014ರ ನಿರ್ಣಯ ನಂಬರ್ 48/2013-14ರಡಿಯಲ್ಲಿ ತಿರಸ್ಕರಿಸಿರುವುದಿಲ್ಲ. ಬದಲಾಗಿ ಸ್ಥಳದ ಗಡಿ ಗುರುತುಗಳ ಬಗ್ಗೆ ತಕರಾರು ಇರುವುದರಿಂದ ಜಂಟಿ ಸರ್ವೆ ಕಾರ್ಯ ನಡೆಸಿ ಸರಿಯಾದ ಗಡಿ ಗುರುತುಗಳನ್ನು ಹಾಕಿಸಿಕೊಳ್ಳಬೇಕೆಂಬುದಾಗಿ ತಿಳಿಸಿರುತ್ತಾರೆ. ಆದ್ದರಿಂದ, ಅವರು ಸಲ್ಲಿಸಿದ ಅರ್ಜಿಯನ್ನು ತಡೆಯಿಡಿಯುವುದಾಗಿ ಮಾತ್ರ ಸರ್ವಾನುಮತದಿಂದ ನಿರ್ಣಯಿಸಲಾಗಿರುತ್ತದೆ.

3. ಇದಲ್ಲದೇ, ದೂರುದಾರರು ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ ಕಲಂ 269ರಡಿಯಲ್ಲಿ ಕಾರ್ಕಳ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರ ಮುಂದೆ ಮೇಲ್ಮನವಿಯನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿ ಪ್ರಾಧಿಕಾರವು ದಿ:17/01/2015 ರಂದು ಗ್ರಾಮ ಪಂಚಾಯತಿಯ ನಿರ್ಧಾರವನ್ನು ಎತ್ತಿ ಹಿಡಿದಿರುತ್ತದೆ ಹಾಗೂ ಮೇಲ್ಮನವಿಯನ್ನು ತಿರಸ್ಕರಿಸಿರುತ್ತದೆ. ಆದ್ದರಿಂದ, ತಮ್ಮಿಂದ ಯಾವುದೇ ಕರ್ತವ್ಯಲೋಪವಾಗಿಲ್ಲವೆಂದು ಎದುರುದಾರರು ತಿಳಿಸಿರುತ್ತಾರೆ.

4. ಎದುರುದಾರರ ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ಎದುರುದಾರರು ತಾವು ನೀಡಿದ ಅರ್ಜಿಗೆ ಯಾವುದೇ ಹಿಂಬರಹವನ್ನು ನೀಡಿರುವುದಿಲ್ಲ. ಶ್ರೀ ರತ್ನಾಕರ್ ಶೆಟ್ಟಿ ಇವರಿಗೆ ದೂರುದಾರರ ಆಸ್ತಿಯ ಪಕ್ಕದಲ್ಲಿ ಯಾವುದೇ ಸ್ಥಿರಾಸ್ತಿಯು ಇರುವುದಿಲ್ಲ ಮತ್ತು ಸದರಿ ರತ್ನಾಕರ್ ಶೆಟ್ಟಿಯವರಿಗೆ ದೂರುದಾರರ ಆಸ್ತಿಯಲ್ಲೂ ಸಹ ಯಾವುದೇ ಹಕ್ಕು ಸಂಬಂಧ ಬಾದ್ಯತೆಗಳು ಇರುವುದಿಲ್ಲ. ತಾನು ಕೊಟ್ಟ ಅರ್ಜಿಯನ್ನು ಏಕೆ ವಿಲೇಗೆ ಇಡಲಾಗಿದೆ ಎಂದು ತಿಳಿಸಿ ಲಿಖಿತ ತಿಳುವಳಿಕೆ ಪತ್ರ ಸಹ ಕೊಟ್ಟಿರುವುದಿಲ್ಲ.

ಎದುರುದಾರರು ತಿಳಿಸಿರುವ ಪ್ರಕರಣಕ್ಕೆ ಮತ್ತು ತಮ್ಮ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲವೆಂದು ತಿಳಿಸಿರುತ್ತಾರೆ.

5. ದೂರಿನಂಶಗಳನ್ನು, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಎದುರುದಾರರು ತಿಳಿಸಿರುವಂತೆ ದೂರುದಾರರು ಪರವಾನಗೆ ಕೋರಿ ಸಲ್ಲಿಸಿದ್ದ ಅರ್ಜಿಗೆ ಶ್ರೀ ರತ್ನಾಕರ್ ಶೆಟ್ಟಿರವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ (ಸದರಿ ತಕರಾರು ಅರ್ಜಿಯನ್ನು ಹಾಜರುಪಡಿಸಲಾಗಿದೆ). ಸದರಿ ಶ್ರೀ ರತ್ನಾಕರ್ ಶೆಟ್ಟಿರವರ ತಕರಾರಿನ ಮೇರೆಗೆ ಮಾಳ ಗ್ರಾಮ ಪಂಚಾಯತಿಯಲ್ಲಿ ನಿರ್ಣಯ ನಂಬರ್ 42/2013-14 ರಲ್ಲಿ "ಅನುಮತಿ ಪತ್ರಕ್ಕಾಗಿ ಬಂದ ಶ್ರೀ ರಾಘವೇಂದ್ರ ಉಪಾಧ್ಯಾಯರ ಅರ್ಜಿ ಹಾಗೂ ಶ್ರೀ ರತ್ನಾಕರ್ ಶೆಟ್ಟಿರವರ ದೂರು ಅರ್ಜಿಗಳನ್ನು ಸಭೆಯಲ್ಲಿ ಪರಿಶೀಲಿಸಲಾಯಿತು. ಈ ಜಾಗದಲ್ಲಿ ತಕರಾರು ಇರುವುದರಿಂದ ಮುಂದಿನ ಸಾಮಾನ್ಯ ಸಭೆಯ ಒಳಗಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಸ್ಥಳ ತನಿಖೆ ನಡೆಸಿ ವರದಿಯನ್ನು ತಯಾರಿಸಬೇಕಾಗಿಯೂ ಹಾಗೂ ಆ ವರದಿಯನ್ನು ಪರಿಶೀಲಿಸಿ ಮುಂದಿನ ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗುವುದು" ಎಂದು ಇರುತ್ತದೆ. (ಸದರಿ ನಿರ್ಣಯದ ಪ್ರತಿಯನ್ನು ಹಾಜರುಪಡಿಸಲಾಗಿದೆ). ನಂತರ ದೂರುದಾರರು ಪಂಚಾಯತಿಯ ನಿರ್ಣಯದ ಮೇರೆಗೆ ಮೇಲ್ಮನವಿಯನ್ನು ಕಾರ್ಯನಿರ್ವಾಹಕ ಅಧಿಕಾರಿ, ಕಾರ್ಕಳ ತಾಲ್ಲೂಕು ಪಂಚಾಯತಿ ಇವರಿಗೆ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಪಿನಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯವರು ಮಾಳ ಗ್ರಾಮ ಪಂಚಾಯತಿಯ ನಿರ್ಣಯ ನಂ.48/2013-14 ರಲ್ಲಿ ಎರಡು ಕಡೆಯವರು ಸರ್ವೇ ಇಲಾಖೆಯಿಂದ ಜಮೀನು ಅಳತೆ ಮಾಡಿಸಿ ಸರಿಯಾದ ಗಡಿ ಗುರುತುಗಳನ್ನು ಮಾಡಿಸಿಕೊಳ್ಳುವಂತೆ ಮತ್ತು ಆ ತನಕ ಶ್ರೀ ರಾಘವೇಂದ್ರ ಉಪಾಧ್ಯಾಯರವರು ಸಲ್ಲಿಸಿದ ಅರ್ಜಿಯನ್ನು ವಿಲೇ ಇಡುವಂತೆ ಗ್ರಾಮ ಪಂಚಾಯತಿ ತೀರ್ಮಾನಿಸಿರುತ್ತದೆ. ಈ ತೀರ್ಮಾನದ ಪ್ರತಿಯನ್ನು ದಿ:06/03/2014 ರಂದು ಸಾಧಾರಣ ಅಂಚೆ ಮೂಲಕ ಹಾಗೂ ದಿ:26.07.2014 ರಂದು ನಿರ್ಣಯದ ನಕಲನ್ನು ನೋಂದಣಿ ಅಂಚೆ ಮೂಲಕ ಕಳುಹಿಸಿಕೊಟ್ಟಿರುವುದು ಕಡತದ ದಾಖಲೆಗಳಿಂದ ವ್ಯಕ್ತವಾಗುತ್ತದೆ. ಈ ನಿರ್ಣಯದ ಮೂಲಕ ತನ್ನ ಅರ್ಜಿಯನ್ನು ವಿಲೇ ಇಟ್ಟಿರುವ ಕಾರಣಕ್ಕಾಗಿ ದೂರುದಾರರು ಮೇಲ್ಮನವಿಯನ್ನು ಸಲ್ಲಿಸಿದ್ದು, ಗ್ರಾಮ ಪಂಚಾಯತಿ ವತಿಯಿಂದ ಸ್ಥಳ ತನಿಖೆಗಾಗಿ ನೀಡಿದ ಸೂಚನಾ ಪತ್ರವನ್ನು ದೂರುದಾರರು ಸ್ವೀಕರಿಸದೇ ನಿರಾಕರಿಸಿರುವುದು ದೃಡಪಟ್ಟಿರುತ್ತದೆ.

6. ಜಮೀನಿನ ಗಡಿ ಕಲ್ಲುಗಳು ಸರಿ ಇಲ್ಲದಾಗ ಗ್ರಾಮ ಪಂಚಾಯತಿಯವರು ಆವರಣ ಗೋಡೆ ರಚಿಸಲು ಅನುಮತಿಯನ್ನು ನೀಡುವುದು, ಅದರಲ್ಲಿಯೂ ಪಕ್ಕದ ಜಮೀನಿನ ಕಬ್ಜೆದಾರರು ಗಡಿಗಳ ಬಗ್ಗೆ

ಆಕ್ಷೇಪಣೆ ಸಲ್ಲಿಸಿದ್ದರೂ ಕೂಡ, ಅವರ ಆಕ್ಷೇಪಣೆಯನ್ನು ಮೀರಿ ಗಡಿ ವಿವಾದಿತ ಜಮೀನಿಗೆ ಗ್ರಾಮ ಪಂಚಾಯತಿ ಆವರಣ ಗೋಡೆ ರಚಿಸಲು ಅನುಮತಿಯನ್ನು ನೀಡುವುದು ಕಾನೂನುಬಾಹಿರವಾಗಿರುತ್ತದೆ ಎಂಬುದಾಗಿ ಚರ್ಚಿಸಿ ಮೇಲ್ಮನವಿಯನ್ನು ಪಂಚಾಯತ್‌ರಾಜ್ ಅಧಿನಿಯಮ ಕಲಂ 269(1)ರಡಿಯಲ್ಲಿ ಪಂಚಾಯತಿ ನಿರ್ಣಯವನ್ನು ಎತ್ತಿಹಿಡಿದು ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ. (ಸದರಿ ಅದೇಶದ ಪ್ರತಿಯನ್ನು ಹಾಜರುಪಡಿಸಲಾಗಿದೆ). ದೂರುದಾರರು ತಮ್ಮ ಪ್ರತ್ಯುತ್ತರದೊಡನೆ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಲ್ಲಿ, ದೂರುದಾರರು ಆವರಣ ಗೋಡೆ ಪರವಾನಗೆ ಕೋರಿ ಸಲ್ಲಿಸಿರುವ ಅರ್ಜಿಗೆ ಶ್ರೀ ರತ್ನಾಕರ್ ಶೆಟ್ಟಿ ಎನ್ನುವವರು ತಕರಾರು ಅರ್ಜಿ ಸಲ್ಲಿಸಿದ್ದು, ಅದರಲ್ಲಿ, ಆವರಣ ಗೋಡೆ ಕಟ್ಟಲು ಪರವಾನಗೆ ನೀಡುವುದನ್ನು ತಡೆಹಿಡಿಯಬೇಕೆಂದು ಕೋರಿರುವುದು ಕಂಡು ಬರುತ್ತದೆ. ಆದರೆ, ದೂರುದಾರರು ಸರ್ವೇ ನಂಬರ್ 446/13 ರಲ್ಲಿ 0.60 ಎಕರೆ ಜಮೀನನ್ನು ಖರೀದಿಸಿರುತ್ತಾರೆ. ಸದರಿ ಖರೀದಿದಾರರು ಶ್ರೀ ಸಂಜೀವ ಶೆಟ್ಟಿ ಇವರಿಂದ ಸದರಿ ಜಮೀನನ್ನು ಖರೀದಿಸಿರುತ್ತಾರೆ. ಸದರಿ ಶ್ರೀ ಸಂಜೀವ ಶೆಟ್ಟಿ ಇವರು ಶ್ರೀ ರತ್ನಾಕರ್ ಶೆಟ್ಟಿ ರವರ ಮಾವರೆಂದು ತಿಳಿಸಿರುವುದು ಸದರಿ ಶ್ರೀ ರತ್ನಾಕರ್ ಶೆಟ್ಟಿಯವರ ತಕರಾರು ಅರ್ಜಿಯಲ್ಲಿ ಕಂಡು ಬರುತ್ತದೆ. ಆದರೆ ಸದರಿ ಸರ್ವೇ ನಂಬರ್ 446/13 ರಲ್ಲಿ 0.60 ಎಕರೆ ಜಮೀನಿಗಾಗಲೀ ಅಥವಾ ಅದರ ಅಕ್ಕಪಕ್ಕದ ಜಮೀನಿಗಾಗಲೀ ಸದರಿ ಶ್ರೀ ರತ್ನಾಕರ್ ಶೆಟ್ಟಿ ರವರು ಹಕ್ಕುಳ್ಳವರಾಗಿರುತ್ತಾರೆಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

7. ಇದಲ್ಲದೇ, ದೂರುದಾರರ ಜಮೀನಿನಲ್ಲಿ ಆವರಣ ಗೋಡೆ ಕಟ್ಟಲು ಏತಕ್ಕಾಗಿ ತಕರಾರು ಮಾಡಲಾಗಿದೆ ಎಂಬುದರ ಬಗ್ಗೆ ವಿವರಣೆಯನ್ನು ತಮ್ಮ ಅರ್ಜಿಯಲ್ಲಿ ನೀಡಿರುವುದಿಲ್ಲ. ಇದಲ್ಲದೇ, ದೂರುದಾರರು ಖರೀದಿಸಿರುವ ಜಮೀನಿಗೆ ಶ್ರೀ ಸಂಜೀವ್ ಶೆಟ್ಟಿಯವರು ಕಬ್ಜೆದಾರರಾಗಿರುತ್ತಾರೆಂದು ತೋರಿಸಲು, ಆರ್‌ಟಿಸಿ ಪ್ರತಿಯನ್ನು ಹಾಜರುಪಡಿಸಲಾಗಿದೆ. ಸದರಿ ಮಾಳ ಗ್ರಾಮದ ಸರ್ವೇ ನಂಬರ್ 446/13 ರ ಜಮೀನಿನ 11ಇ ನಕ್ಷೆಯನ್ನು ಸಹ ಹಾಜರುಪಡಿಸಲಾಗಿದ್ದು, ಸದರಿ ಜಮೀನಿನ ಚೆಕ್ಕುಬಂದಿಯನ್ನು ಸಹ 11ಇ ನಕ್ಷೆಯ ಪುಟ 2 ರಲ್ಲಿ ನಮೂದಿಸಲಾಗಿದೆ. ದೂರುದಾರರು ಶ್ರೀ ಸಂಜೀವ ಶೆಟ್ಟಿಯವರಿಂದ ಸದರಿ ಜಮೀನಿನನ್ನು ಖರೀದಿಸಿರುವ ಬಗ್ಗೆ ಖರೀದಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ದೂರುದಾರರು ಪಂಚಾಯತಿಗೆ ಪರವಾನಗೆ ಕೋರಿ ಸಲ್ಲಿಸಿದ್ದ ಅರ್ಜಿಯ ಪ್ರತಿಯನ್ನು ಹಾಜರುಪಡಿಸಲಾಗಿದೆ. ಇದಲ್ಲದೇ, ದೂರುದಾರರು ಆರಕ್ಷಕ ನಿರೀಕ್ಷಕರು ಕಾರ್ಕಳದ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದು, ಅದರಲ್ಲಿ ತಾನು ಸರ್ವೇ ನಂಬರ್:446/13ರ 0.60 ಎಕರೆ ಜಮೀನನ್ನು ಶ್ರೀ ಸಂಜೀವ್ ಶೆಟ್ಟಿಯವರಿಂದ ಖರೀದಿಸಿರುತ್ತೇನೆಂದು, ಸದರಿ ಜಮೀನಿಗೆ ಸಂಬಂಧಿಸಿದ

ಗಡಿ ಗುರುತಿನ ಕಲ್ಲುಗಳನ್ನು ಕಿತ್ತು ಹಾಕಿರುತ್ತಾರೆಂದು, ಇದನ್ನು ಶ್ರೀಮತಿ ಲಲಿತ ಇವರ ಮಗನಾದ ಶ್ರೀ ರತ್ನಾಕರ್ ಶೆಟ್ಟಿ ಎಂಬುವವರು ಕಿತ್ತು ಹಾಕಿರುತ್ತಾರೆಂದು, ದಿ:16/11/2013 ರಂದು ಕಾರ್ಕಳ ತಾಲ್ಲೂಕು ಸರ್ವೇಯರ್ ಮೂಲಕ ಗಡಿ ಗುರುತು ಅಳತೆ ಮಾಡಿ ಗಡಿ ಗುರುತಿನ ಕಲ್ಲುಗಳನ್ನು ಹಾಕಿಸಲಾಗಿರುತ್ತದೆ. ಆದರೆ, ಇದನ್ನು ಶ್ರೀ ರತ್ನಾಕರ್ ಶೆಟ್ಟಿ ಎಂಬುವವರು ಕಿತ್ತು ಹಾಕಿರುವ ಬಗ್ಗೆ ಅನುಮಾನ ಇರುತ್ತದೆ. ತಾನು ಸದರಿ ಜಮೀನನ್ನು ಅಳತೆ ಮಾಡಿಸುವ ಸಂದರ್ಭದಲ್ಲಿ ಅಳತೆ ಮಾಡಿದ ದಿನದಂದು ಶ್ರೀ ರತ್ನಾಕರ್ ಶೆಟ್ಟಿಯವರು ಸ್ಥಳಕ್ಕೆ ಬಂದು ವಿರೋಧ ವ್ಯಕ್ತಪಡಿಸಿರುತ್ತಾರೆ. ಆದ್ದರಿಂದ, ಸದರಿಯವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ದೂರು ನೀಡಿರುವುದು ಕಂಡು ಬಂದಿರುತ್ತದೆ (ಸದರಿ ದೂರಿನ ಪ್ರತಿಯನ್ನು ಹಾಜರುಪಡಿಸಲಾಗಿದೆ). ಸದರಿ ದೂರಿನ ಮೇಲೆ ಉಭಯಪಕ್ಷದವರನ್ನು ಕರೆಸಿ ಠಾಣಾಧಿಕಾರಿಯವರು ದೂರುದಾರರ ತಂಟೆ ತಕರಾರಿಗೆ ಬಾರದಂತೆ ಸದರಿ ಶ್ರೀ ರತ್ನಾಕರ್ ಶೆಟ್ಟಿ ಇವರಿಗೆ ತಿಳಿಸಿರುವ ಬಗ್ಗೆ ಹಿಂಬರಹವನ್ನು ಸದರಿ ಠಾಣೆಯಿಂದ ನೀಡಿಲಾಗಿರುತ್ತದೆ (ಸದರಿ ಹಿಂಬರಹದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಪೋಲೀಸ್ ಠಾಣೆಗೆ ನೀಡಿರುವ ದೂರಿನ ಪ್ರತಿಯನ್ನು ಪರಿಶೀಲಿಸಿದಲ್ಲಿ ಸರ್ವೇ ನಂಬರ್ 446ಕ್ಕೆ ಸಂಬಂಧಿಸಿದಂತೆ 5 ಜನ ಪಾಲುದಾರರಿರುತ್ತಾರೆಂದು, ಅವರಲ್ಲಿ ಆನಂದಿ, ಶ್ರೀಮತಿ ಲಲಿತಾ, ಶ್ರೀ ಸದಾಶಿವಾ, ಶ್ರೀಮತಿ ಲೀಲಾ ಇವರಲ್ಲಿ ಶ್ರೀಮತಿ ಲಲಿತಾಳ ಮಗನಾದ ಶ್ರೀ ರತ್ನಾಕರ್ ಶೆಟ್ಟಿಯವರು ತಕರಾರು ಮಾಡಿರುವ ಬಗ್ಗೆ ತಿಳಿಸಿರುತ್ತಾರೆ. ಸದರಿ ಶ್ರೀ ರತ್ನಾಕರ್ ಶೆಟ್ಟಿಗೆ ದೂರುದಾರರ ಜಮೀನಿನ ಮೇಲೆ ಯಾವುದೇ ಹಕ್ಕು ಇರುವುದು ಕಂಡು ಬರುವುದಿಲ್ಲ.

8. ದೂರುದಾರರ ಆಸ್ತಿಗೆ ಸಂಬಂಧಿಸಿದಂತೆ ಶ್ರೀ ರತ್ನಾಕರ್ ಶೆಟ್ಟಿಯವರ ಹಕ್ಕೇನಾದರೂ ಇದಲ್ಲಿ, ಅದನ್ನು ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥ ಪಡಿಸಿಕೊಳ್ಳಬೇಕಾಗಿರುತ್ತದೆ ಹಾಗೂ ಸದರಿ ದೂರುದಾರರ ಜಮೀನಿನ ಅಕ್ಕಪಕ್ಕದಲ್ಲಿ ಶ್ರೀ ರತ್ನಾಕರ್ ಶೆಟ್ಟಿಯವರ ಜಮೀನಿನ ಮೇಲೆ ಹಕ್ಕು ಇರುವುದು ಕಂಡು ಬರುವುದಿಲ್ಲ. ಆದ್ದರಿಂದ, ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ದೂರುದಾರರಿಗೆ ಆವರಣ ಗೋಡೆ ಕಟ್ಟಲು ಪರವಾನಗೆ ನೀಡದೇ ಇರಲು ಸಕಾರಣಗಳು ಇದ್ದಂತೆ ಕಂಡು ಬರುವುದಿಲ್ಲ. ಶ್ರೀ ರತ್ನಾಕರ್ ಶೆಟ್ಟಿಯವರಿಗೆ ದೂರುದಾರರು ಖರೀದಿಸಿರುವ ಜಮೀನಿನಲ್ಲಿ ಯಾವುದಾದರೂ ಹಕ್ಕು ಇದ್ದಲ್ಲಿ, ಅದರ ಬಗ್ಗೆ ಸಿವಿಲ್ ಪ್ರಕರಣವನ್ನು ಹೂಡಿ ಆದೇಶ ಪಡೆಯಬಹುದಾಗಿರುತ್ತದೆ. ಇಲ್ಲಿ ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯದ ಯಾವುದೇ ಆದೇಶವು ದೂರುದಾರರು ತಿಳಿಸಿರುವ ಸರ್ವೇ ನಂಬರ್ 446/6 (446/13) ಗೆ ಸಂಬಂಧಿಸಿದಂತೆ ಇರುವುದು ಕಂಡು ಬಂದಿರುವುದಿಲ್ಲ.

9. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ದೂರುದಾರರಿಗೆ ಆವರಣ ಗೋಡೆ**

**ಕಟ್ಟಲು ನ್ಯಾಯಯುತವಾಗಿ ಕ್ರಮ ಜರುಗಿಸಿ ಆವರಣ ಗೋಡೆ ಕಟ್ಟಲು ಪರವಾನಗೆ ನೀಡುವಲ್ಲಿ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

3/4/17

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**

3/4/17